
**‘ಹೊರಡುವ ಗಡಿಬಿಡಿಯಲ್ಲಿ ಗ್ಯಾಸ್ ಸ್ಟೌವ್ ಆಫ್ ಮಾಡಿದೆನೋ ಇಲ್ವೋ, ನೀವಂತೂ ಏನನ್ನೂ ಜ್ಞಾಪಿಸುವುದಿಲ್ಲ... ಟೀವಿ ನೋಡ್ತಿದ್ದೀರಲ್ಲ, ಅದನ್ನೂ ಆಫ್ ಮಾಡಿದ್ರೋ ಇಲ್ವೋ, ಎಲ್ಲಾ ನಾನೇ ಹೇಳ್ಬೇಕು...’ ನಿಟ್ಟುಸಿರುಬಿಟ್ಟಳು ಸುಮಿ. ಶಂಕ್ರಿ ಇನ್ನೊಮ್ಮೆ ಬೇಕ್ ಹಾಕಿದ. ‘ಇನ್ನೊಂದು ಗುಂಡಿನೇನ್ರೀ? ಏನ್ರೀ ನೀವು, ನೆಟ್ಟಗೆ ಬೈಕ್ ಓಡಿಸೋದನ್ನೂ ಕಲಿತಿಲ್ಲ’ ಎಂದಳು.**



ನಾವು ಹೆಣ್ಣಿನ ಕಡೆಯವರು ನೆನಪಿರಲಿ’ ಎಂದು ಎಚ್ಚರಿಸಿದಳು. ಶಂಕ್ರಿ ಹೆಲ್ಮೆಟ್ ಒಳಗೆ ತಲೆಯಾಡಿಸಿದ.

‘ಬಟ್ಟೆ ಇಸ್ತ್ರಿ ಮಾಡಿಕೊಳ್ಳಲೂ ಬರೊಲ್ಲ ನಿಮಗೆ. ಷರ್ಟಿನ ಬೆನ್ನಲ್ಲಿ ಸುಕ್ಕು ಹಾಗೇ ಇದೆ. ನೀವು ಐರನ್ ಮಾಡಿದ್ರೆ ಪ್ಯಾಂಟ್‌ನಲ್ಲಿ ಎರಡುಮೂರು ಗೆರೆ ಕಾಣ್ತವೆ, ಅದ್ಯಾವತ್ತು ಕಲಿತೀರೋ...’ ಸುಮಿಗೆ ಬೇಸರ.

ಶಂಕ್ರಿ ಇನ್ನೊಮ್ಮೆ ಬ್ರೇಕ್ ಹಾಕಿದ.

‘ಮೀಸೆಗೆ ಹೇರ್ ಡೈ ಹಚ್ಚುವುದೂ ನಿಮಗೆ ಗೊತ್ತಿಲ್ಲ. ಮಕ್ಕಳು ಕೇಕ್ ತಿಂದು ಮೂತಿಗೆ ಬಳಿದುಕೊಳ್ಳುವಂತೆ ಡೈ ಅನ್ನು ಕೆನ್ನೆಗೆ ಬಳಿದುಕೊಂಡಿದ್ದೀರಿ. ಮದ್ವೆ ಮನೆಯಲ್ಲಿ ನಿಮ್ಮನ್ನು ನೋಡಿ ಜನ ನಗೋದಿಲ್ವೇ? ನಿಮ್ಮನ್ನು ಕಟ್ಟಿಕೊಂಡು ನಾನಾಗಿರುವುದಕ್ಕೆ ಹೆಣಗುತ್ತಿದ್ದೇನೆ, ನನ್ನ ಕರ್ಮ...’ ಎಂದು ನೊಂದಳು.

ಶಂಕ್ರಿ ಮತ್ತೆ ಬೇಕ್ ಹಾಕಿದ.

‘ಈಗೇನಾತ್ರೀ, ಇನ್ನೊಂದು ಗುಂಡಿ ಸಿಗ್ತಾ? ಗುಂಡಿ ಅವಾಯ್ಡ್ ಮಾಡಿಕೊಂಡು ಹೋಗ್ರೀ’ ಎಂದು ರೇಗಿದಳು.

‘ಹೊರಡುವ ಗಡಿಬಿಡಿಯಲ್ಲಿ ಗ್ಯಾಸ್ ಸ್ಟೌವ್ ಆಫ್ ಮಾಡಿದೆನೋ ಇಲ್ವೋ, ನೀವಂತೂ ಏನನ್ನೂ ಜ್ಞಾಪಿಸುವುದಿಲ್ಲ... ಟೀವಿ ನೋಡ್ತಿದ್ದೀರಲ್ಲ, ಅದನ್ನೂ ಆಫ್ ಮಾಡಿದ್ರೋ ಇಲ್ವೋ, ಎಲ್ಲಾ ನಾನೇ ಹೇಳ್ಬೇಕು...’ ನಿಟ್ಟುಸಿರುಬಿಟ್ಟಳು ಸುಮಿ.

ಶಂಕ್ರಿ ಇನ್ನೊಮ್ಮೆ ಬೇಕ್ ಹಾಕಿದ.

‘ಇನ್ನೊಂದು ಗುಂಡಿನೇನ್ರೀ? ಏನ್ರೀ ನೀವು, ನೆಟ್ಟಗೆ ಬೈಕ್ ಓಡಿಸೋದನ್ನೂ ಕಲಿತಿಲ್ಲ’ ಎಂದಳು.

‘ನೀನು ಸುಮ್ನೆ ಬಾಯಿ ಮುಚ್ಚಿಕೊಂಡು ಕೂತ್ಕೋ. ಈ ಟ್ರಾಫಿಕ್, ಗುಂಡಿ ಮಧ್ಯೆ ಡ್ರೈವಿಂಗ್ ಮಾಡೋದು ಎಷ್ಟು ಕಷ್ಟ ಅಂತ ಹಿಂದೆ ಕುಳಿತಿರುವ ನಿನಗೆ ಗೊತ್ತಾಗೊಲ್ಲ’ – ಶಂಕ್ರಿ ರೇಗೇಬಿಟ್ಟ.

‘ಮನೆಯಲ್ಲಿದ್ದಾಗ ನಾನು ಏನಾದ್ರೂ ಹೇಳೋಣ ಅಂದ್ರೆ ಕೇಳಿಸಿಕೊಳ್ಳದೆ ಅದೂ ಇದೂ ನೆಪ ಹೇಳಿ ತಪ್ಪಿಸಿಕೊಳ್ತೀರಿ, ಈಗ ತಪ್ಪಿಸಿಕೊಳ್ಳಲಾಗಲ್ಲ ಅಂತ ಹೇ ಳ್ತಿದ್ದೀ ನಿ , ಅದ್ಯಕ್ಯಾಕ್ರೀ ಹಿಂಗಾಡ್ತಿರಾ?’ ಎಂದು ಸುಮಿನೂ ರೇಗಿದಳು.

‘ನಾನು ಟ್ರಾಫಿಕ್ ರೂಲ್ಸ್ ಫಾಲೋ ಮಾಡಲೋ? ನಿನ್ನ ಮಾತನ್ನು ಫಾಲೋ ಮಾಡಲೋ? ನಿನ್ನ ಜೊತೆ ಸಂಸಾರ ಮಾಡೋದಕ್ಕಿಂಥಾ ಬೈಕ್‌ನಲ್ಲಿ ಕೂರಿಸಿಕೊಂಡು ಸಂಚಾರ ಮಾಡೋದೇ ಕಷ್ಟ...’ ಎಂದು ಗೊಣಗಿಕೊಂಡು ಹೋಗುತ್ತಿದ್ದ ಶಂಕ್ರಿ ಆಯ ತಪ್ಪಿ ಹೆಂಡ್ತಿ, ಬೈಕ್ ಸಮೇತ ರಸ್ತೆಯ ಗುಂಡಿಗೆ ಬಿದ್ದ. ಇವನ ಪ್ಯಾಂಟ್ ಹರಿದು ಮಂಡಿ ಗಾಯವಾಗಿ ರಕ್ತ ಹರಿಯಿತು, ಸುಮಿಯ ರೇಷ್ಮೆ ಸೀರೆ ಹರಿಯಿತು. ಟ್ರಾಫಿಕ್ ಜಾಮ್ ಆಯ್ತು, ಅಕ್ಕಪಕ್ಕದ ಜನ ಜಮಾಯಿಸಿದರು.

‘ಬೈಕ್ ಓಡಿಸುವಾಗ ಅದೂ ಇದೂ ಮಾತನಾಡಿ ಡಿಸ್ಟರ್ಬ್ ಮಾಡ್ಬೇಡ ಅಂತ ಹೇಳಿದ್ರೂ ನೀನು ಕೇಳಲ್ಲ...’ – ಶಂಕ್ರಿಗೆ ಹೆಂಡ್ತಿ ಮೇಲೆ ಸಿಟ್ಟು ಬಂತು.

‘ಮೈ ಮೇಲೆ ಪ್ರಜ್ಞೆ ಇಟ್ಟುಕೊಂಡು ಬೈಕ್ ಓಡಿಸಬೇಕೂರೀ, ಹೆಂಡ್ತಿಯನ್ನು ಕೂರಿಸಿಕೊಂಡು ಮೈಮರೆಯಬಾರದು. ನಿಮ್ಮ ಸರಸ ಸಲ್ಲಾಪವನ್ನು ಮನೆಯಲ್ಲಿ ಇಟ್ಟುಕೊಳ್ಳಿ’ ಎಂದು ಹಿರಿಯರೊಬ್ಬರು ಬೈದರು.

‘ಗಂಡಂದಿರ ಯಶಸ್ಸಿನ ಹಿಂದೆ ಹೆಂಡ್ತಿ ಇರ್ತಾಳೆ, ಬೈಕ್ ಸವಾರನ ಯಡವಟ್ಟಿಗೆ ಹೆಂಡ್ತಿ ಹಿಂದೆ ಕುಳಿತಿರ್ತಾಳೆ, ಹಹ್ಹಹ್ಹಾ...’ – ಮತ್ತೊಬ್ಬ ಟ್ರಾಜಿಡಿ ಜೋಕ್ ಹೇಳಿದ.

‘ಯಾರಾದ್ರೂ ಆ್ಯಂಬುಲೆನ್ಸ್‌ಗೆ ಫೋನ್ ಮಾಡ್ರೀ...’ ಎಂದೊಬ್ಬ ಹೇಳಿದ.

‘ಆ್ಯಂಬುಲೆನ್ಸ್ ಬರುವಷ್ಟು ಅನಾಹುತ ಆಗಿಲ್ಲ, ಪೊಲೀಸರಿಗೆ ಫೋನ್ ಮಾಡ್ರಿ’ ಎಂದ ಪಕ್ಕದವನು.

‘ಪೊಲೀಸ್ ಇರಲಿ, ಮೊದಲು ಎಂಎಲ್‌ಎಗೆ ಫೋನ್ ಮಾಡ್ರೀ, ಅವರು ಸ್ಪಾಟಿಗೆ ಬರಲು ಹೇಳ್ರೀ. ರಸ್ತೆ ಗುಂಡಿ ಮುಚ್ಚಿ ಅಂತ ಹಲವು ಬಾರಿ ಮನವಿ ಮಾಡಿಕೊಂಡ್ರೂ, ಹೋರಾಟ ಮಾಡಿದ್ರೂ ಮುಚ್ಚಲಿಲ್ಲ. ದಿನಕ್ಕೆ ಹತ್ತಾರು ಜನ ಗುಂಡಿಗೆ ಬಿದ್ದು ಕೈಕಾಲು ಮುರಿದುಕೊಳ್ತಿದ್ದಾರೆ. ಈ ಅನಾಹುತಕ್ಕೆ ಎಂಎಲ್‌ಎ ಕಾರಣ...’ ಎಂದು ಒಬ್ಬ ಆಕ್ರೋಶ ವ್ಯಕ್ತಪಡಿಸಿದ.

‘ರಸ್ತೆ ತಡೆದು ಪ್ರತಿಭಟನೆ ಮಾಡೋಣ, ಎಂಎಲ್‌ಎ–ಮಂತ್ರಿ ಇಬ್ಬರೂ ಸ್ಥಳಕ್ಕೆ ಬರಲಿ’ ಎಂದ ಇನ್ನೊಬ್ಬ.

‘ಗುಂಡಿ ಮುಚ್ಚದ ಸರ್ಕಾರಕ್ಕೆ ಧಿಕ್ಕಾರ, ಶಾಸಕರಿಗೆ ಧಿಕ್ಕಾರ...’ ಎಂದು ಕೂಗಿದರು.

‘ರಸ್ತೆ ತೆರವು ಮಾಡಿ ಫುಟ್‌ಪಾತ್‌ನಲ್ಲಿ ಪ್ರತಿಭಟನೆ ಮಾಡಿಕೊಳ್ಳಿ, ಟ್ರಾಫಿಕ್ ಜಾಮ್ ಆಗಿದೆ, ವೆಹಿಕಲ್ಸ್ ಪಾಸ್ ಆಗಲು ಜಾಗ ಮಾಡಿಕೊಡ್ರೀ...’ ನಿಂತಿದ್ದ ವಾಹನ ಸವಾರರು ಕೂಗಾಡಿದರು.

‘ಜಾಗ ಬಿಡೊಲ್ಲ, ನೀವೂ ನಮ್ಮ ಹೋರಾಟದಲ್ಲಿ ಭಾಗವಹಿಸಿ’ ಕೆಲವರು ವೀರಾವೇಶ ಪ್ರದರ್ಶಿಸಿದರು.

‘ಸಾರ್, ಗಲಾಟೆ ಜಾಸ್ತಿಯಾಗುತ್ತೆ, ನೀವು ಹೊರಟುಬಿಡಿ, ಪೊಲೀಸರು ಬಂದರೆ ಕೇಸು, ಕೋರ್ಟು ಅಂತ ಹೆಣಗಾಡಬೇಕಾಗುತ್ತದೆ’ ಎಂದು ಒಬ್ಬ ಶಂಕ್ರಿಗೆ ಹೇಳಿದ.

ಅಷ್ಟೊತ್ತಿಗೆ ಟ್ರಾಫಿಕ್ ಪೊಲೀಸರು ಬಂದು ಶಂಕ್ರಿಯ ಬೈಕನ್ನು ಸೈಡಿಗೆ ಹಾಕಿಸಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಇವರ ಆ್ಯಕ್ಸಿಡೆಂಟ್ ಮಾಹಿತಿ ಪಡೆದುಕೊಂಡರು.

‘ಹೆಲ್ಮೆಟ್ ಎಲ್ರೀ?’ ಶಂಕ್ರಿನ ಕೇಳಿದರು ಪೊಲೀಸರು.

‘ಹಾಕಿದ್ದೇನಲ್ಲಾ ಸಾರ್, ಡಿಎಲ್, ಡಾಕ್ಯೂಮೆಂಟ್ ಎಲ್ಲಾ ಇದೆ’ ಅಂದ.

‘ನಿಮ್ಮದಲ್ಲಾರೀ, ನಿಮ್ಮ ಹೆಂಡ್ತಿ ಹೆಲ್ಮೆಟ್ ಹಾಕಿಲ್ಲ’.

‘ಸಾರ್ ಮದ್ವೆಗೆ ಹೊರಟಿದ್ವಿ, ಹೆಲ್ಮೆಟ್ ಹಾಕಿದ್ರೆ ಹೇರ್‌ಸ್ಟೈಲ್ ಹಾಳಾಗುತ್ತೆ ಅಂತ ನಾನು ಹಾಕಿಲ್ಲ’ ಎಂದಳು ಸುಮಿ.

‘ಫೈನ್ ಕಟ್ಟಿ...’ ಎಂದರು ಪೊಲೀಸರು.

‘ಸಾರ್, ಮತ್ತೆ ಹೀಗೆ ಮಾಡೊಲ್ಲ, ಹೆಲ್ಮೆಟ್ ಹಾಕ್ಕೊಂಡೇ ಬೈಕ್ ಹತ್ತುತ್ತೇನೆ’ ಸುಮಿ ಗೋಗರೆದಳು.

‘ಹೌದೂ ಸಾರ್, ಈ ಸಾರಿ ಬಿಟ್ಟುಬಿಡಿ’ ಶಂಕ್ರಿ ಕೇಳಿಕೊಂಡ.

‘ಆಗೊಲ್ಲಾರಿ, ಫೈನ್ ಕಟ್ಟಲೇಬೇಕು’ ಎಂದರು.

ಮದುವೆಗೆ ತಂದಿದ್ದ ಮುಯ್ಯಿ ಕವರನ್ನು ಶಂಕ್ರಿ ಕೊಟ್ಟ, ಪೊಲೀಸರು ದುಡ್ಡು ಎಣಿಸಿಕೊಂಡು ಖಾಲಿ ಕವರ್ ವಾಪಸ್ ಕೊಟ್ಟು, ರಸೀತಿ ಕೊಟ್ಟರು.

‘ನೀವು ಆಸ್ಪತ್ರೆಗೆ ಹೋಗಿ ಗಾಯಕ್ಕೆ ಸ್ಟಿಚ್ಚಿಂಗ್ ಹಾಕಿಸಿಕೊಳ್ಳಿ, ಹಾಗೇ, ನಿಮ್ಮ ಹೆಂಡ್ತಿಯ ರೇಷ್ಮೆಸೀರೆಗೆ ಟೈಲರ್ ಹತ್ರ ಸ್ಟಿಚ್ಚಿಂಗ್ ಮಾಡಿಸಿ’ ಎಂದು ಒಬ್ಬ ಪುಕ್ಕಟ್ಟೆ ಸಲಹೆ ಕೊಟ್ಟ.

ಶಂಕ್ರಿ–ಸುಮಿ ಮದುವೆ ಮರೆತು ಬೈಕ್ ಹತ್ತಿಕೊಂಡು ಆಸ್ಪತ್ರೆ ಕಡೆ ಹೊರಟರು.

ಪ್ರತಿಕ್ರಿಯಿಸಿ: feedback@sudha.co.in